# ಸೈಕ್ಲಿಂಗ್‌ನಲ್ಲೇ ದೇಶ ಸುತ್ತಿದ ನಿಕೋಲಸ್

'ಸೈಕ್ಲಿಂಗ್' ಈಗ ಹೆಚ್ಚು ಜನರನ್ನು ತನ್ನತ್ತ ಸೆಳೆದುಕೊಳ್ಳುತ್ತಿದೆ. ಕೆಲವರು ಹವ್ಯಾಸಕ್ಕಾಗಿ ಸೈಕ್ಲಿಂಗ್ ನೆಚ್ಚಿಕೊಂಡರೆ, ಇನ್ನು ಕೆಲವರು ಕ್ರೀಡೆಗಾಗಿ, ಜೀವನದ ಭಾಗವಾಗಿ ಸ್ವೀಕರಿಸಿರುವವರೂ ಇದ್ದಾರೆ. ಸೈಕ್ಲಿಂಗ್‌ನಲ್ಲಿ ಪ್ರವಾಸ ಕೈಗೊಳ್ಳುವ ವರ್ಗವೂ ಈಗ ಸೃಷ್ಟಿಯಾಗಿದೆ. ಮಕ್ಕಳಿಂದ ಹಿಡಿದು ವೃದ್ಧರಾದಿಯಾಗಿ ಎಲ್ಲರನ್ನೂ ಆಕರ್ಷಿಸುತ್ತಿದೆ. ಇದರಿಂದ ವಿದೇಶಿಗರೇನು ಹೊರತಾಗಿಲ್ಲ.

ಸೈಕ್ಲಿಂಗ್ ಮೂಲಕ ದೇಶ ಸುತ್ತುವ, ಪ್ರವಾಸಿತಾಣಗಳ ಸೊಬಗನ್ನು ಸವಿಯುವ ಇರಾದೆಯೊಂದಿಗೆ ಭಾರತಕ್ಕೆ ಬರುವ ವಿದೇಶಿಗರು, ಇಲ್ಲಿನ ಪ್ರಕೃತಿಯನ್ನು ಕಣ್ತುಂಬಿಕೊಳ್ಳುತ್ತಾರೆ.

ಲಂಡನ್‌ನಿಂದ ಬಂದಿರುವ ನಿಕೋಲಸ್ ಕೂಡ ಅವರಲ್ಲೊಬ್ಬರು. ಕರ್ನಾಟಕ ಸೇರಿಂದತೆ ದೇಶದ ಪ್ರಮುಖ ಸ್ಥಳಗಳನ್ನು ವೀಕ್ಷಿಸಿರುವ ನಿಕೋಲಸ್ ಅವರಿಗೆ ಬೆಟ್ಟದ ತುದಿಯಲ್ಲಿರುವ ದೇವಾಲಯಗಳನ್ನು ವೀಕ್ಷಿಸುವುದು, ಕಡಿದಾದ ದಾರಿಯಲ್ಲಿ ಸೈಕ್ಲಿಂಗ್ ಮೂಲಕ ಸಾಗುವುದು ಹೆಚ್ಚು ಇಷ್ಟ. ತಮ್ಮ ಊರಿನಲ್ಲಿ ಹವ್ಯಾಸವಾಗಿ ರೂಢಿಸಿಕೊಂಡ ಸೈಕ್ಲಿಂಗ್ ಅನ್ನು ದೇಶ ಸುತ್ತುವ ಕನಸಿಗೆ ಬಳಸಿಕೊಂಡರಂತೆ. ಊರೂರುಗಳನ್ನು ಸೈಕಲ್ ಮೇಲೆ ಸುತ್ತುವ 55ರ ಹರೆಯದ ನಿಕೋಲಸ್ ಅವರಿಗೆ, ಸೈಕ್ಲಿಂಗ್ ಈಗ ಹೆಚ್ಚು ಆಪ್ಯಾಯಮಾನವಾಗಿದೆ. ಹಾಗಂತ ಪ್ರವಾಸಿ ತಾಣಗಳಿಗೆ ಸಾಗುವ ಎಲ್ಲ ದಾರಿಯನ್ನೂ ಸೈಕ್ಲಿಂಗ್ ಮೂಲಕವೇ ಸಾಗುವುದಿಲ್ಲ. ಬಸ್ ಮೂಲಕವೂ ಒಂದಷ್ಟು ದೂರು ಕ್ರಮಿಸುವ ಇವರು, ಪ್ರವಾಸಿ ತಾಣಗಳ ಸಮೀಪ ಬಸ್ ನಿಲ್ಲಿಸಿ ಸೈಕಲ್ ಏರುತ್ತಾರೆ.

'ಸೈಕ್ಲಿಂಗ್‌ನಿಂದ ಆರೋಗ್ಯ ವೃದ್ಧಿಸುತ್ತದೆ. ಮನಸ್ಸು ಉಲ್ಲಾಸಿತಗೊಳ್ಳುತ್ತದೆ. ಪ್ರಕೃತಿಯ ನೈಜ ಸೌಂದರ್ಯವನ್ನು ಆಸ್ವಾದಿಸಲು ಸಾಧ್ಯವಾಗುತ್ತದೆ. ದೇಹವನ್ನು ಎನರ್ಜಿಟಿಕ್ ಆಗಿ ಇಡಲು ಇನ್ನೇನು ಬೇಕು' ಎಂದು ನಗುತ್ತಾರೆ ನಿಕೋಲಸ್.

ಒಂದು ತಿಂಗಳ ಭಾರತ ಪ್ರವಾಸದ ಯೋಜನೆ ಹಾಕಿಕೊಂಡು ಬಂದಿರುವ ನಿಕೋಲಸ್ ಇಂಗ್ಲೆಂಡ್, ರಷ್ಯಾ, ಕೆನೆಡಾ, ಅಮೆರಿಕ ಹಾಗೂ ಇತರೆಡೆಗಳಿಂದ ಬಂದಿರುವ ಸಹ ಪ್ರವಾಸಿಗರೊಂದಿಗೆ ಮೈಸೂರಿನ ಚಾಮುಂಡಿ ಬೆಟ್ಟ ವೀಕ್ಷಿಸಲು ಸೈಕಲ್ ಏರಿದ್ದರು. ಬೃಹತ್ ನಂದಿ ವಿಗ್ರಹ ವೀಕ್ಷಿಸಿ ಆಶ್ಚರ್ಯ ವ್ಯಕ್ತಪಡಿಸಿದ ಅವರು, 'ಈ ರೀತಿಯ ವಿಗ್ರಹ ಭಾರತದಲ್ಲಿ ಮಾತ್ರ ಕಾಳಲು ಸಾಧ್ಯ' ಎಂದು ಇಲ್ಲಿನ ಸಂಸ್ಕೃತಿಯನ್ನು ಕೊಂಡಾಡಿದರು.

'ನಾನೂ ದೇವರನ್ನು ಪ್ರೀತಿಸುತ್ತೇನೆ, ನಂಬುತ್ತೇನೆ. ಇಲ್ಲಿನ ದೇವಾಲಯಗಳಿಗೆ ಭೇಟಿ ನೀಡಿದರೆ ಧನ್ಯತಾ ಭಾವ ಮೂಡುತ್ತದೆ' ಎನ್ನುವ ನಿಕೋಲಸ್ ಅವರದ್ದು ಇದು ಭಾರತದ ಮೊದಲ ಪ್ರವಾಸವಲ್ಲ. ಮೂರ್ನಾಲ್ಕು ವರ್ಷಗಳ ಹಿಂದೆ ಇಲ್ಲಿಗೆ ಭೇಟಿ ನೀಡಿ ಉತ್ತರ ಭಾರತದ ಬಹುತೇಕ ಸ್ಥಳಗಳನ್ನು ವೀಕ್ಷಿಸಿದ್ದರು. ಈಗ ದಕ್ಷಿಣ ಭಾರತ ಸುತ್ತುವಲ್ಲಿ ನಿರತರಾಗಿದ್ದಾರೆ.

ಲಂಡನ್‌ನಲ್ಲಿ ಸ್ಟ್ರಕ್ಚರಲ್ ಎಂಜಿನಿಯರ್ ಆಗಿರುವ ನಿಕೋಲಸ್, ವರ್ಷಕ್ಕೊಮ್ಮೆ ವಿದೇಶಗಳನ್ನು ಸುತ್ತುವ ಹವ್ಯಾಸ ರೂಢಿಸಿಕೊಂಡಿದ್ದಾರೆ. 'ಪ್ರವಾಸ ನನಗೆ ಹೆಚ್ಚು ಖುಷಿ ನೀಡುತ್ತದೆ. ನನ್ನ ವೃತ್ತಿಯನ್ನು ಎಷ್ಟು ಪ್ರೀತಿಸುತ್ತೇನೋ ಅಷ್ಟೇ ಪ್ರೀತಿ ನನ್ನ ಹವ್ಯಾಸದ ಮೇಲೂ ಇದೆ. ಎರಡಕ್ಕೂ ಸಮನ ಪ್ರಾಶಸ್ತ್ಯ ನೀಡುತ್ತೇನೆ' ಎನ್ನುತ್ತಾರೆ ಅವರು.

### ಲುಕಿಂಗ್ ಲೈಕ್ ಸಂಜಯ್ ದತ್!

ಪ್ರವಾಸಿ ತಾಣಗಳಿಗೆ ಭೇಟಿ ಕೊಟ್ಟಾಗ ಭಾರತೀಯ ಪ್ರವಾಸಿಗರು ಇವರಿಗೆ 'ಸಂಜಯ್ ದತ್' ಎಂದು ಕರೆಯುತ್ತಾರಂತೆ. ಬಾಲಿವುಡ್ ನಟ ಸಂಜಯ್ ದತ್ ರೀತಿ ಕಾಣುತ್ತೀರಿ ಎಂದು ಹೇಳಿ ಫೋಟೊ ಕ್ಲಿಕ್ಕಿಸಿಕೊಳ್ಳುತ್ತಾರೆ. 'ಆಗ ಒಂದು ರೀತಿ ಪುಳಕ ಉಂಟಾಗುತ್ತದೆ' ಎನ್ನುವ ನಿಕೋಲಸ್ ಅವರಿಗೆ ಬಾಲಿವುಡ್ ಸಿನಿಮಾಗಳನ್ನು ವೀಕ್ಷಿಸುವ ಆಸಕ್ತಿ ಮೂಡಿದೆಯಂತೆ.

ಲಂಡನ್‌ನಿಂದ ಬಂದ ನಿಕೋಲಸ್

ಇಲ್ಲಿನ ಖಾರದ ತಿನಿಸುಗಳನ್ನು ಹೆಚ್ಚು ಇಷ್ಟಪಡುವ ಅವರು, ಸೂಪ್‌ಗೆ ಮನಸೋತಿದ್ದಾರೆ. 'ರಾಜಸ್ತಾನದ ಮರಳುಗಾಡಿನಲ್ಲಿ ಓಡಾಡಿರುವ ಅನುಭವ ಮರೆಯಲಾಗದ್ದು. ಒಂಟೆ ಮೇಲೆ ಸವಾರಿ 'ಕ್ರೇಜಿ' ಎನಿಸಿತ್ತು' ಎಂದು ಪ್ರವಾಸದ ನೆನಪುಗಳನ್ನು ಮೆಲುಕು ಹಾಕುತ್ತಾರೆ ನಿಕೋಲಸ್.

ಆಗ್ರಾ, ದೆಹಲಿ, ತ್ರಿಪುರ, ತಮಿಳುನಾಡು, ಮೈಸೂರು, ಬೆಂಗಳೂರು ಹೀಗೆ ಭಾರತದ ಪ್ರಮುಖ ಸ್ಥಳಗಳನ್ನು ವೀಕ್ಷಿಸಿರುವ ನಿಕೋಲಸ್, ತಾಜ್‌ಮಹಲ್ ಅಂದಕ್ಕೆ ಮನಸೋತಿದ್ದಾರೆ. ಭಾರತಕ್ಕೆ ಮತ್ತೆ ಮತ್ತೆ ಭೇಟಿ ನೀಡಿ ಇಲ್ಲಿನ ಸಂಸ್ಕೃತಿ, ಆಚಾರ– ವಿಚಾರಗಳನ್ನು ಹತ್ತಿರದಿಂದ ನೋಡಬೇಕೆನ್ನುವ ನಿಕೋಲಸ್ ಅವರ ಬಯಕೆ ಇನ್ನೂ ತಣಿದಿಲ್ಲ.

■ ಸುಮಾ ಬಿ.